ಹೋಟೆಲುಗಳು ಸಮಾನತೆಯ ಕೇಂದ್ರಗಳು. ಪೂರ್ವಕಾಲದಲ್ಲಿ ಹೇಗಿದ್ದವೋ ನಾನು ನೋಡಿದ ಕಾಲದಿಂದಲೂ ಎಲ್ಲರೂ ಯಾವುದೇ ಜಾತಿ ಅಂತಸ್ತು ಧರ್ಮ ವರ್ಗ ಭೇದಗಳಿಲ್ಲದೆ ಒಟ್ಟಾಗಿ ಕೂತು ಊಟ ಮಾಡುವ ಸ್ಥಳ. ಯಾವುದೋ ಹಳ್ಳಿಯಲ್ಲಿ ಪ್ರತ್ಯೇಕ ಕಪ್ಪು ಬಸಿ ಇಟ್ಟಿದ್ದಾರೆ ಅಂತ ಅಪರೂಪಕ್ಕೊಮ್ಮೆ ಸುದ್ದಿ ಪ್ರಕಟವಾದರೂ ಅದಕ್ಕೀಗ ಆಸ್ಪದವಿಲ್ಲ. ಶಿಕ್ಷೆ ಇದೆ, ಕಾನೂನು ಇದೆ. ಬಗೆಹರಿಯದ ವಿಷಯವೆಂದರೆ ಇನ್ನೊಬ್ಬರ ಮನೆಯಲ್ಲಿ ತಿನ್ನಲು ಮಡಿ ಮಡಿ ಎನ್ನುವವರು ಹೋಟೆಲಿನಲ್ಲಿ ಮಾತ್ರ ತಿನ್ನುತ್ತಿರುತ್ತಾರೆ! ಇದು ಹೇಗೆ ಸಾಧ್ಯ? ಮಡಿಗೂ ಕಾಲ ದೇಶ ಎಂಬುದು ಇದೆಯೇ? ಇದನ್ನು ವ್ಯಾಖ್ಯಾನಿಸುವುದು ಕಷ್ಟ. ಇನ್ನು ಇಂಥ ಊರಲ್ಲಿ ಇಂಥ ಹೋಟೆಲಲ್ಲಿ ಇಂಥದ್ದನ್ನೇ ತಿನ್ನಬೇಕೆಂಬ ಟ್ರೆಂಡ್ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ದಾವಣಗೆರೆಯ ಬೆಣ್ಣೆ ದೋಸೆ ಈಗ ಎಲ್ಲ ಊರಲ್ಲೂ ಲಭ್ಯ. ದೋಸೆ ಮಾಡುವಲ್ಲಿ ದಾವಣಗೆರೆಯ ಹದವಿದೆಯೋ ಅಥವಾ ಅದರ ಮೇಲೆ ಹಾಕುವ ಬೆಣ್ಣೆ ಮಾತ್ರ ದಾವಣಗೆರೆಯಿಂದ ತಂದದ್ದೋ ಯಾರೂ ಹೇಳುತ್ತಿಲ್ಲ. ಖಾನಾವಳಿಯ ಖಡಕ್ ರೊಟ್ಟಿಗಳು ಈಗ ಹಪ್ಪಳದಂತಾಗಿದ್ದರೂ ಖಡಕ್ ಅನ್ನೋ ಹೆಸರು ಮಾತ್ರ ಸ್ಟ್ರಾಂಗ್ ಆಗಿದೆ. ಹಳ್ಳಿ ಹೋಬಳಿಗಳ ಹೋಟೆಲ್‌ನವರೂ ಈಗ ಇಂಟರ್ ನ್ಯಾಷನಲ್, ಬ್ಲೂಸ್ಟಾರ್, ಗ್ರೀನ್ ಲ್ಯಾಂಡ್, ಇನ್ನು, ಪಿನ್ನು ಅಂತ ಹೆಸರಿಟ್ಟುಕೊಂಡು ಅಂತರರಾಷ್ಟ್ರೀಯ ಮಟ್ಟಕ್ಕೆ ಏರುತ್ತಿದ್ದರೆ ಸಿಟಿ ಹೋಟೆಲುಗಳು ರೊಟ್ಟಿಮನೆ, ಹಳ್ಳಿಮನೆ, ಕಾಡುಮನೆ, **Hut** ಗಿಟ್ ಅಂತ ಹೆಸರಿಟ್ಟುಕೊಳ್ಳುತ್ತ ದೇಸೀಮಟ್ಟಕ್ಕೆ ಇಳಿಯುತ್ತಿದ್ದಾರೆ. ಸಮಾಜಶಾಸ್ತ್ರಜ್ಞರು ಇದನ್ನು 'ವ್ಯಾಪಾರೀ ಚಿಂತನೆಯ ದ್ವಿಮುಖ ಸಂಸ್ಕೃತೀಕರಣ' ಎಂದು ಕರೆಯುವರೇನೋ. ಸಣ್ಣ ಊರಲ್ಲಿ ಎರಡು ಗೂಟ ನೆಟ್ಟು ಪ್ಲಾಸ್ಟಿಕ್ ಹೊದಿಕೆ ಹಾಕಿಕೊಂಡವರು ರಾಗಿಬಾಲ್, ಪಿಕ್ಚರ್ ರೈಸ್, ತಂದೂರಿ, ಹರ್ಬಲ್ ಟೀ ಸವಿಯುತ್ತಿದ್ದರೆ ನಗರಗಳ ದೊಡ್ಡ ಹೋಟೆಲುಗಳಲ್ಲಿ ಪಡ್ಡು, ಗುಂತಪೊಂಗಲು, ಮಲೆನಾಡು ಕಷಾಯಗಳು ಶುರುವಾಗಿವೆ. ಯಾರು ಏನೇ ಮಾಡಿಕೊಂಡರೂ ನಮಗೆ ಹೋಟೆಲು ಬೇಕು. ಅವರಿಗೆ ಗ್ರಾಹಕ ಬೇಕು. ಆದರೆ ಇಬ್ಬರಿಗೂ ದುಡ್ಡು ಬೇಕು. ಅದೇ ಇರದಿದ್ದರೆ?

ನಾನು ಪಿಜಿ ಮಾಡುತ್ತಿದ್ದಾಗ ಮೂವರು ಸ್ನೇಹಿತರು ಮಾನಸಗಂಗೋತ್ರಿಯ ಕ್ಯಾಂಟೀನ್‌ಗೆ ಒಂದು ಮಧ್ಯಾಹ್ನ ಹೋಗಿ ದೋಸೆ ತಿಂದು ಕಾಫಿ ಕುಡಿದು ಬಂದೆವು. ಮೂವರಿಗೂ ಹಸಿವೆಯಾಗಿತ್ತೆಂದು ನಾವು ತಿಂದ ಬಗೆಯಲ್ಲಿಯೇ ಗೊತ್ತಾಗುತ್ತಿತ್ತು. ಆದರೆ ಮೂವರಲ್ಲಿಯೂ ದುಡ್ಡಿಲ್ಲ ಎಂದು ಪರಸ್ಪರರಿಗೆ ಗೊತ್ತಿರಲಿಲ್ಲ. ಬಿಲ್ ಬಂತು. ಆದರೆ ಮುಟ್ಟುವವರಾರು? ಅದು ನಮಗೆ ಕಂಡಿಲ್ಲವೇನೋ ಎಂಬಂತೆ ನೀರು ಕುಡಿಯುತ್ತ, ಕೈ ಒರೆಸಿಕೊಳ್ಳುತ್ತ ಏನೋ ವಿಷಯ ಕೆದಕುತ್ತ ಎಲ್ಲ ಆಟಗಳೂ ಆದವು. ಏನೂ ಪ್ರಯೋಜನವಾಗಲಿಲ್ಲ. ನೀನು, ನೀನು ಅಂತ ಅಂದು ಕೊನೆಗೆ ಬಿಗುಮಾನ ಬಿಟ್ಟು ಹೇಳಿಕೊಂಡೆವು. ಈಗ ಏನು ಮಾಡಬಹುದು! ಷೇರ್ ಮಾಡಲೂ ದುಡ್ಡಿರದಷ್ಟು ಜೇಬು ಖಾಲಿ. ಹೀಗೆ ಮಾಡಿಕೊಂಡಿದ್ದಕ್ಕೇ ತಾನೇ 'ಮೇಯರ್ ಮುತ್ತಣ್ಣ' ಸಿನಿಮಾದಲ್ಲಿ ರಾಜ್‌ಕುಮಾರ್ ಹಿಟ್ಟು ರುಬ್ಬಿದ್ದು. ಮುಂದೆ ನಮ್ಮ ಗತಿ ಏನು? ಅವಮಾನ, ಆತಂಕಗಳು ಒಟ್ಟೊಟ್ಟಿಗೇ ಧಾವಿಸಿದವು. ಕೊನೆಗೆ ಇದ್ದುದರಲ್ಲೇ ಸಾಲ ಹುಟ್ಟಿಸಬಲ್ಲ ಮುಖಭಾತಿಯುಳ್ಳ ಯಾರಾದರೊಬ್ಬರು ಹೊರ ಹೋಗಿ ಹೇಗಾದರೂ ಮಾಡಿ ದುಡ್ಡು ಹೊಂದಿಸಿ ತರಬೇಕು. ದೇವರ ಮೇಲೆ ಭಾರ ಹಾಕಿ ಒಬ್ಬನನ್ನು ಕಳಿಸಿ ಉಳಿದಿಬ್ಬರು ಏನೋ ಗಹನ ಚರ್ಚೆ ನಡೆಸುವವರಂತೆ ನಾಟಕ ಮಾಡುತ್ತ ಕೂತೆವು. ಕಷ್ಟ ಸಹಿಸಿಕೊಳ್ಳುವ ಭಕ್ತರಿಗೇ ದೇವರು